ಮೇಲಕ್ಕೆಳೆದ ದೋಣಿಗಳ ಪಕ್ಕದಲ್ಲಿ ಕೂತು ಬಲೆ ರಿಪೇರಿ ಮಾಡುತ್ತಿದ್ದ ಉಪ್ಪುಪ್ಪು ಮೈನ ಬೆಸ್ತರಲ್ಲಿ ಯಾವುದೇ ಅವಸರವಿರಲಿಲ್ಲ. ನಾಲ್ಕಾರು ನಾಡದೋಣಿಗಳು ಅಲ್ಲಲ್ಲಿ ತೇಲುವುದು ಬಿಟ್ಟರೆ ಕಡಲು ಖಾಲಿಯಾಗಿತ್ತು. ಇಂಥ ನಿಧಾನಗತಿಯ ಹೊರಜಗತ್ತಿನಿಂದ ಗುಲಾಬಿಯ ಮನಸ್ಸಿನ ಅವ್ಯಕ್ತ ಚಡಪಡಿಕೆ ಹೆಚ್ಚಾಗುತ್ತಿತ್ತು. ಹೆಚ್ಚು ಹೊತ್ತು ಅಲ್ಲಿರಲಾಗದೇ ಎದ್ದು ಹೋದಳು.

ಅಲಿಗದ್ದಾ ತೀರಕ್ಕೆ ಬಂದಾಗ ಆ ತುದಿಯಲ್ಲಿ ಏಂಡಿ ಬಲೆಯವರು ಬಲೆಗೆ ಸಿಕ್ಕ ಮೀನುಗಳನ್ನು ಕೈಯಿಂದ ಒಂದೊಂದಾಗಿ ಬಿಡಿಸುತ್ತಿರುವುದು ಕಾಣಿಸಿತು. ತಾಜಾ ಮೀನಿಗಾಗಿ ಸ್ಥಳಕ್ಕೇ ಬಂದ ಕಾರವಾರಿಗರ ನಡುವೆ ತಾನೂ ತಲೆಹಾಕಿದಳು. ಪಚ್ಚು, ಗುರ್ಕು, ಸಮದಾಳಿ, ಬಣಗು, ಇತ್ಯಾದಿ ಪಂಚಬೆರಕಿ ಮೀನುಗಳು ಇದ್ದವು. ಹೆಚ್ಚು ಕಸಿಪಿಸಿ ಮಾಡದೆ ಒಂದಿಷ್ಟು ಖರೀದಿಸಿ, ಮೀನುಮುಟ್ಟಿಯನ್ನು ತಲೆಮೇಲೆ ಹೊತ್ತು ಪೇಟೆ ಕಡೆ ದಡದಡ ಹೆಜ್ಜೆಯಿಟ್ಟಳು. ಹಸಿ ಹಸಿ ಇದ್ದದ್ದಕ್ಕೋ, ಮಾರುಕಟ್ಟೆಯಲ್ಲಿ ಮೀನು ಇಲ್ಲದಿದ್ದಕ್ಕೋ ದಾರಿಯಲ್ಲೇ ಖರ್ಚಾಯಿತು. 'ಭಾಳ್ ದಿವಸದ್ ಮ್ಯಾನೆ ಬಂದಿಯಲ್ಲೆ ಗುಲಾಬಿ?' ಎಂದು ಪರಿಚಯದವರೆಲ್ಲ ಒಂದೆರಡು ಕುಶಾಲು ಮಾತಾಡಿಯೇ ಕಳಿಸಿದರು. ಕೆಲವರು 'ಮೇ ತಿಂಗಳಲ್ಲಿ ರಜೆಗೆ ಮಕ್ಕಳು ಬರ್ತಾರೆ. ಹೋಗುವಾಗ ಅವರಿಗೆ ಒಣಮೀನು ಬೇಕಾಗೂದು. ಚಂದದ ಸೊರ, ಬಂಗ್ಡೆ ನೀನೇ ತಂದಕೊಡಬೇಕು, ಹಾಂ?' ಎಂದು ಅಡ್ವಾನ್ಸಾಗಿ ಹೇಳಿಟ್ಟರು. 'ಆಯ್ತಾ, ನಮ್ಮ ತದಡಿ ದೊಡ್ಡವ್ವಿಗೆ ಹೇಳಿಕ್ತಿ' ಎಂದಳು ಗುಲಾಬಿ.

ಇಂಥ ಕಷ್ಟ ಸುಖದ ಮಾತುಗಳನ್ನು ಕೇಳಿಕೊಂಡು, ಮೀನು ಮಾರಿ ಮನೆಗೆ ಬರುವಾಗ ಮಧ್ಯಾಹ್ನ ಆಯ್ತು. ಏನೋ ಒಂದು ಅಡುಗೆ ಮಾಡಿಕೊಂಡು ಉಣ್ಣುವ ಶಾಸ್ತ್ರ ಮುಗಿಸಿ, ಗಾಳಿ ಬರಲಿ ಎಂದು ಕದ ತೆರೆದೇ ತೆಣೆ ಮೇಲೆ ಅಡ್ಡಾದಳು. ಮಗನನ್ನು ಎಂದೂ ಬಿಟ್ಟಿರದ ಅವಳ ತಲೆಯಲ್ಲಿ ಏನೇನೋ ವಿಚಾರಗಳು ಬರುತ್ತಿದ್ದವು. ಗಂಡ ಗಣಪತಿ ಕಡಲಲ್ಲಿ ಮುಳುಗಿ ಸತ್ತ ದುಃಖವು ಗುಲಾಬಿಗೆ ಮರೆಯಲಾಗದ್ದಾದರೂ ಆಕೆ ಎಂದೂ ಬದುಕಿಗೆ ವಿಮುಖಳಾಗಲಿಲ್ಲ. ಆಗಾಗ ಉಮ್ಮಳಿಸಿ ಬರುವ ಗಂಡನ ನೆನಪು ಅವಳ ಭಾವತೀರಕ್ಕೆ ಅಪ್ಪಳಿಸಿದರೂ, ದಂಡೆಯಲ್ಲಿ ಶಾಂತಗೊಳ್ಳುವ ಕಿರು ಅಲೆಗಳಂತೆ ಗುಲಾಬಿ ಮತ್ತೆ ಬದುಕಿಗೆ ಮರಳುತ್ತಿದ್ದಳು. ನಿತ್ಯವೂ ಮೀನು ಮಾರಿ ಕಾಸು ಗಿಟ್ಟಿಸಿ ತಾಯಿ–ಮಗ ಅದು ಹೇಗೋ ಬದುಕು ಕಟ್ಟಿಕೊಂಡಿದ್ದರು. ಗಂಡನ ಮತ್ತು ತವರಿನ ಕಡೆಯ ಸಂಬಂಧಿಕರು ಕಷ್ಟ ಕಾಲಕ್ಕೆ ಒದಗಿ ಬರುತ್ತಿದ್ದದ್ದೂ ಸುಳ್ಳಲ್ಲ. ಮಗನೂ ಯಾವುದೇ ಅಡ್ಡ ದಾರಿಗಿಳಿಯದೇ ತಾನಾಯ್ತು ತನ್ನ ಕೆಲಸವಾಯ್ತು ಎಂಬ ರೀತಿಯಲ್ಲಿದ್ದ. ಇತ್ತೀಚಿಗಿನ ಬೆಳವಣಿಗೆಗಳಿಂದ ಮಗನ ಜೀವನಕ್ರಮ ಮತ್ತು ಗತಿಯಲ್ಲಾದ ಬದಲಾವಣೆಗಳು ಅವಳನ್ನು ತುಸು ಚಿಂತೆಗೆ ಹಚ್ಚಿದ್ದವು. ಮಗನ ಪ್ರೇಮ, ಆ ಪ್ರೇಮವು ತಂದೊಡ್ಡಿದ ತಾಪತ್ರಯಗಳಿಂದ ಅಧೀರಳಾದದ್ದು ನಿಜ.

ಬದುಕಿಗೆ ಒಂದು ನೆಲೆ ಕಾಣದೇ ಪ್ರೀತಿ ಪ್ರೇಮದಂಥ ರಗಳೆಯಲ್ಲಿ ಬಿದ್ದು ಅವನ ಸಾಮಾನ್ಯ ಬದುಕು ಏರಪೇರಾಗಿರುವ ಬಗ್ಗೆ ಯೋಚಿಸುವಾಗ ಅವಳಿಗೆ ಸಂಕಟವಾಗುತ್ತದೆ. ಹಾಗಂತ 'ಅದೆಲ್ಲ ಬ್ಯಾಡಾ ಮಗ' ಎನ್ನಲಾರಳು. ಪ್ರೀತಿಯಿಂದ ವಿಮುಖನಾಗಲೂ ಹೇಳಲಾರಳು. ಮಗ ಘಟ್ಟದ ಮೇಲಿನ ಹುಡುಗಿಯನ್ನು ಮೆಚ್ಚಿದ್ದು ಹೃದಯಾರೆ ಎಂಬುದು ಅವಳ ಹೃದಯ ಅರಿಯದ ವಿಷಯವೇನಲ್ಲ. ಪ್ರೀತಂ ನೇರವಾಗಿ ಎಂದೂ ತಾನವಳನ್ನು ಪ್ರೀತಿಸುತ್ತೇನೆ ಎಂದು ಆಯಿಗೆ ತಿಳಿಸಿರಲಿಲ್ಲ. ಸುತ್ತು ಬಳಸಿ ಸುಮಿ ಎಂಬ ಘಟ್ಟದ ಮೇಲಿನ ಹುಡುಗಿ ಬಗ್ಗೆ ಆಗಾಗ ಮಾತಾಡುತ್ತಿದ್ದ ಅಷ್ಟೇ. ತನಗಿನ್ನೂ ಬಾಲಕನೇ ಆಗಿದ್ದ ಪ್ರೀತಂ ದೊಡ್ಡಾಗುತ್ತಿದ್ದಾನೆ ಎಂಬುದು ಸೂಕ್ಷ್ಮವಾಗಿ ಅವಳ ಗಮನಕ್ಕೆ ಬಂದಿತ್ತು. ಗುಲಾಬಿಗೆ ಹೆಚ್ಚಿನ ಖುಷಿಯಾದದ್ದು ಆ ಹುಡುಗ–ಹುಡುಗಿ ಇಬ್ಬರೂ ಪರಸ್ಪರ ಹಚ್ಚಿಕೊಂಡ ರೀತಿಗೆ. ಆಸ್ಪತ್ರೆಯಂಥ ಆಸ್ಪತ್ರೆಯಲ್ಲಿ ಮೊದಲ ಬಾರಿ ಕಂಡಾಗ, ಇಬ್ಬರೂ ಶಿವ ಪಾರ್ವತಿಯರ ಪ್ರತಿರೂಪವಾಗಿ ಕಂಡಿದ್ದರು! ಇಬ್ಬರ ಪ್ರೀತಿಯನ್ನು ಬಡತನ ಮತ್ತು ಶ್ರೀಮಂತಿಕೆಯ ದೃಷ್ಟಿಯಲ್ಲಿ ತೂಗಿ ನೋಡಲಿಲ್ಲ. ಜಾತಿ ಪಾತಿ ಬಗ್ಗೂ ಯೋಚಿಸಲಿಲ್ಲ. ಮಗ ಗುಲಬರ್ಗಾಕ್ಕೆ ಹೊರಟಾಗ ಸಂಬಂಧಿಕರೂ 'ನಿನ್ನ ಮಗ ಅಲ್ಲಿಗೆಂತಕೆ ಹೋತ್ನಾ, ಸಾಯೂಕೆ' ಎಂದು ಅವಳ ಆತಂಕವನ್ನು ಇನ್ನಷ್ಟು ಹೆಚ್ಚಿಸಿದ್ದು ನಿಜ. ಆದರೆ ಒಡಲಿಗಾಗಿ ಸಮುದ್ರಕ್ಕಿಳಿಯದಂತೆ ತಡೆಯಲು ಯಶಸ್ವಿಯಾದರೂ, ಮಗನ ಪ್ರೀತಿಯ ಕಡಲನ್ನು ತಡೆಯಲಾರೆ ಎಂಬುದು ಅವಳಿಗೆ ಗೊತ್ತಿತ್ತು.

ಮಗ ಹೋದಾಗಿಂದಲೂ ಗುಲಾಬಿಗೆ ಮನಸಿನಲ್ಲಿ ಸಮಾಧಾನ ಇರಲಿಲ್ಲ. ಅದೇನೋ ಚಡಪಡಿಕೆ. ಹುಡುಗ ಎರಡು ದಿನ ಸರಿಯಾಗಿ ಫೋನ್ ಕೂಡ ಮಾಡಿರಲಿಲ್ಲ. ಮೂರನೇ ದಿನ ಕಾಲ್ ಮಾಡಿ ಸುಮಿಯಿಂದಲೂ ಮಾತಾಡಿಸಿದಾಗಲೇ ಅವಳ ಉಸಿರು ಸಮ ಆದದ್ದು. 'ನಾಗತಿಹಳ್ಳಿ ಸರ್ ಸಿನಿಮಾಕ್ಕೆ ಕರೆದಾರೆ ಆಯಿ' ಅಂತ ಮಗ ಹೇಳಿದ್ದರೂ, ಅದು ಗಂಭೀರವಾಗಿ ಅವಳ ಮನಸ್ಸಿಗಿಳಿದಿರಲಿಲ್ಲ. ಆದರೆ 'ಫಿಲಮ್ ಸ್ಟಾರ್ ಮದರ್ ಆಗ್ಬಿಟ್ರಿ ನೀವು ಆಂಟಿ' ಅಂತ ಆ ಹುಡುಗಿ ಸುಮಿ ಹೇಳಿದ ಸ್ಟೈಲಿಗೇ ಮಗ ಹೀರೋ ಥರ ಕಂಡಿದ್ದ. ಕಲಿಯಲು ಮಗ ಅಂಥ ಹುಶಾರಿ ಅಲ್ಲ ಅಂತ ಗೊತ್ತಿತ್ತು ಗುಲಾಬಿಗೆ. ಆದರೆ ಏನನ್ನಾದರೂ ಮನಃಪೂರ್ವಕವಾಗಿ ಮಾಡುತ್ತಿದ್ದ. ಜಾವೆಲಿನ್ ಕೋಚ್ ರೊಡ್ರಿಗ್ಸ್ ಮಾಸ್ತರ್ ಒಮ್ಮೆ ಮೀನುಪೇಟೆಯಲ್ಲಿ ಸಿಕ್ಕವರು ಅದನ್ನೇ ಹೇಳಿದ್ದರು. ಹೀಗಾಗಿ ಮಗ ಒಂದು ಮಟ್ಟದ ಬದುಕನ್ನು ರೂಪಿಸಿಕೊಳ್ಳುವನು ಎಂಬ ವಿಶ್ವಾಸ ಅವಳಿಗಿತ್ತು. ಆದರೆ ಈ ಸಿನಿಮಾ ಲೈನಿಗೆ ಬರುತ್ತಾನೆ ಅಂತ ಅವಳೆಂದೂ ಊಹಿಸಿರಲಿಲ್ಲ. ನಿಜ, ಗಂಡ ಗಣಪತಿಗೆ ಭಯಂಕರ ಸಿನಿಮಾ ಹುಚ್ಚು ಇತ್ತು. ಅವನು ಶಂಕರನಾಗನ ಅಭಿಮಾನಿಯಾಗಿದ್ದ. ಕಾರವಾರಕ್ಕೆ ಅವನ ಸಿನಿಮಾ ಬಂದರೆ ತಪ್ಪದೇ ನೋಡುತ್ತಿದ್ದ. ಪ್ರಸನ್ನ ಟಾಕೀಸಿನವರು ಶಂಕರನಾಗರ ಸಿನಿಮಾ ತರಿಸಿದಾಗ ತಪ್ಪದೇ ಫಸ್ಟ್ ಶೋಗೇ ಹೋಗಿ ನೋಡಿ ಬರುವಂಥ ಹುಚ್ಚು ಇತ್ತು.

ಅವನು ಮೂಡು ಚೆನ್ನಾಗಿದ್ದಾಗ ಗುಲಾಬಿಗೆ 'ರೋಸೀ' ಎಂದೇ ಕರೆಯುತ್ತಿದ್ದ. 'ರೋಸೀ, ಡಾರ್ಲಿಂಗ್ ಐ ಆಮ್ ಗೋಯಿಂಗ್ ಟು ಸೀ... ಸೀ ಯು ಸೂನ್, ರೋಸೀ ಡಿಯರ್!' ಎಂದು ಹೂಬೇಹೂಬ್ ಶಂಕರನಾಗನ ಧ್ವನಿಯಲ್ಲಿ ಡೈಲಾಗ್ ಹೇಳುತ್ತಿದ್ದ. ಗುಲಾಬಿಗೆ ಅನಂತನಾಗ್ ಅಂದ್ರೆ ಬಹಳ ಇಷ್ಟ. ಬೋಟಿಯಿಂದ ಬಂದ ದಿನ ರಾತ್ರಿ ಲಾಸ್ಟ್ ಶೋಗೆ ಟಾಕೀಸಿಗೆ ಇಬ್ಬರೂ ಹೋಗುತ್ತಿದ್ದರು. ಹೋಗುವಾಗ ಸೈಕಲ್ ಹಿಂದಿನ ಸೀಟ್ ಮೇಲೆ ಕುಳ್ಳಿಸಿಕೊಂಡು ಹೋದರೂ ನಡುರಾತ್ರಿ ವಾಪಸು ಬರುವಾಗ ಗುಲಾಬಿಯನ್ನು ಬಲವಂತವಾಗಿ ಮುಂದೆ ದಂಡಿನ ಮೇಲೆ ಕುಳ್ಳಿಸಿಕೊಂಡು ಬರುತ್ತಿದ್ದ. ಹೋಗುವಾಗ ಒಳದಾರಿಯಲ್ಲಿ ಹೋದರೂ ಬರುವಾಗ ಸುತ್ತಿ ಬರುವ ಸಮುದ್ರ ತೀರದ ದಾರಿ ಹಿಡಿಯುತ್ತಿದ್ದ. ಗುಲಾಬಿಗೆ ಗಂಡನ ಇಂಥ ರೋಮ್ಯಾನ್ಸು ಇಷ್ಟವಾದರೂ ಕಂಡವರು ಏನನ್ನುವರು, ಎಂಬ ಸಣ್ಣ ಪುಕುಪುಕು ಇರುತ್ತಿತ್ತು. ಪ್ರೀತಂ ಹೊಟ್ಟೆಯಲ್ಲಿದ್ದಾಗ ಡಿಶುಂ ಡಿಶೂಂ ಸಿನಿಮಾ ಬೇಡಾ ಅಂತ ರಾಜಕುಮಾರ್ ಮತ್ತು ಅನಂತನಾಗ್ ಅವರ ಚಿತ್ರಗಳಿಗೆ ಮಾತ್ರ ಕಂಪನಿ ಕೊಡುತ್ತಿದ್ದಳು. ಆದರೆ ಅವರ ಸಿನಿಮಾಗಳ ಕಚಗುಳಿಯಿಡುವ ದೃಶ್ಯಗಳು ಬಂದಾಗ ಪ್ರೀತಂ ಹೊಟ್ಟೆಯೊಳಗೆ ಕಿಕ್ ಕೊಟ್ಟು ಗುಲಾಬಿಯನ್ನು ರೋಮಾಂಚನಗೊಳಿಸುತ್ತಿದ್ದ. ಅದೆಲ್ಲ ಖರೆ, ಆದರೆ ಮಗ ಭೂಪತಿ ಹೀಗೆ ಸಿನಿಮಾಕ್ಕೆ ಎಂಟ್ರಿ ಕೊಡುವುದನ್ನು ಎಂದೂ ಕಲ್ಪಿಸಿಕೊಂಡಿರಲಿಲ್ಲ. ಗಂಡ ಬದುಕಿದ್ದರೆ ಬಹುಶಃ 'ಹೇಯ್, ಮೈ ಸನ್ ಬಿಕಮ್ ಫಿಲಮ್ ಸ್ಟಾರ್... ಐ ಆಮ್ ಫಿಲಮ್ ಸ್ಟಾರ್ ಫಾದರ್' ಅಂತ ಶಂಕರನಾಗ್ ಥರ ತುಟಿ ಕೊಂಕಿಸಿ ಹಲ್ಲು ಕಚ್ಚಿಹಿಡಿದ ಸ್ಟೈಲಿನಲ್ಲಿ ಡೈಲಾಗ್ ಹೊಡಿತ್ತಿದ್ದ ಎಂದು ನಗು ಬಂತು.

ಆಗಲೇ ರೋಹಿತನ ಬೈಕು ರೊಂಯ್ ರೊಂಯ್ ಅಂತ ಮನೆ ಮುಂದೆ ಬಂದು ನಿಂತಿದ್ದು!

'ಏನ್ ಗುಲಾಬಕ್ಕ, ಮಗ ಸಿನಿಮಾ ಸ್ಟಾರ್ ಆದ್ ಖುಶಿಲೆ ಆ ನಮೂನಿ ನಗ್ಯಾಡ್ತಾ ಇಂವೆ' ಅಂದ. 'ಆ ದಿವ್ಸ ಬಂದ್ ಹೋದಂವ ಇಂದ ಬಂದಿ. ಗುಲಾಬಕ್ಕನ ಮರ್ತೇ ಹೋಯ್ತಲ್ಲೋ ನಿಂಗೆ' ಅಂದಳು. ರೋಹಿತ್ ಚಿಟ್ಟೆ ಮೇಲೆ ಕುಳ್ಳುತ್ತಾ 'ಟೂರ್ನಾಮೆಂಟಿಗೆ ಹೋಗದ್ನೆ, ನಿನ್ನ ಮಗ ಮೊಬೈಲ್ ಯಾಕೆ ಸ್ವಿಚ್ ಆಫ್ ಮಾಡ್ಯಾ?' ಅಂದ. 'ಅಯ್ಯೋ, ಅದ ದೊಡ್ಡ ಕತೆ ಮಾರಾಯಾ, ಅದ ಬಿಡ ಹೊಸ ನಂಬರ್ ತಗಾ, ಮಾತಾಡ' ಎಂದು ಮೊಬೈಲ್ ತಂದುಕೊಟ್ಟಳು. 'ಕಷಾಯ ಮಾಡ್ಲಾ, ಶರಬತ್ತ ಮಾಡ್ಲಾ ತಮ್ಮಾ?' ಅಂದಳು. 'ಏನೂ ಬೇಡಾ ಗುಲಾಬಕ್ಕ, ಪ್ರೀತಂನ ಫೋಟೊ ಪೇಪರನಲ್ಲೆ ಬಂದಿದ, ನೋಡ್ ಬಾ' ಅಂದ.

ರೋಹಿತನ ಜೊತೆ ಬಂದಿದ್ದ ವಿಕಾಸ್ 'ಮಾಂಶಿ, ಪ್ರೀತಂ ಕೆನ್ ಯತಾ?' ಅಂದ. 'ಮಕ್ ಗೊತ್ ನಾರೇ ಪುತಾ, ತು ವಿಚಾರ್' ಎಂದಳು. ಅಷ್ಟೊತ್ತಿಗೆ ಕಾಲ್ ಕನೆಕ್ಟ್ ಆಗಿ ಪ್ರೀತಂ 'ಹಲೋ ಆಯಿ' ಅಂದಾಗ ರೋಹಿತ್ 'ನನ್ಮಗನೆ, ಜೋಳದ ರೊಟ್ಟಿ